# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ, ಮಾರಶೆಟ್ಟಿಹಳ್ಳಿ ಗ್ರಾಮದಲ್ಲಿ ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್ (ಹೆಚ್.ಎ.ಎಲ್)ನ ಹೆಲಿಕಾಪ್ಟರ್ ಘಟಕಕ್ಕೆ ಪ್ರಸ್ತಾಪಿಸಲಾದ ಸ್ಥಳದಲ್ಲಿರುವ ಅನಧಿಕೃತ ಕೃಷಿಕರಿಗೆ ಪರಿಹಾರ ನೀಡುವ ಬಗ್ಗೆ.

ಓದಲಾಗಿದೆ:
1. ಜಿಲ್ಲಾಧಿಕಾರಿ, ತುಮಕೂರು ಇವರ ಪತ್ರ ಸಂಖ್ಯೆ. ಇಆಫೀಸ್ ಸಂ: ಎಲ್ಎನ್ ಡಿ (ಗುಬ್ಬಿ) ಸಿಆರ್: 169 / 2019 / 29317 ದಿ. 02.02.2021.
2. ಜಿಲ್ಲಾಧಿಕಾರಿ, ತುಮಕೂರು ಇವರ ಪತ್ರ ಸಂಖ್ಯೆ. ಇಆಫೀಸ್ ಸಂ: ಎಲ್ಎನ್ ಡಿ (ಗುಬ್ಬಿ) ಸಿಆರ್: 169 / 2019 / 29317 ದಿ. 17.08.2021
3. ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 36 ಐಟಿಎಸ್ 2018 ಬೆಂಗಳೂರು, ದಿನಾಂಕ: 17.01.2019
4. ಜಿಲ್ಲಾಧಿಕಾರಿ, ತುಮಕೂರು ಇವರ ಪತ್ರ ಸಂಖ್ಯೆ. ಇಆಫೀಸ್ ಸಂ: ಎಲ್ಎನ್ ಡಿ (ಗುಬ್ಬಿ) ಸಿಆರ್: 169 / 2019 / 29317 ದಿ. 08.09.2021

ಪ್ರಸ್ತಾವನೆ:

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿ, ಬಿದರೆಹಳ್ಳ ಕಾವಲ್ ಗ್ರಾಮದ ಸ.ನಂ.01 ರಲ್ಲಿ ವಿಸ್ತೀರ್ಣ 610-00 ಎಕರೆ ಜಮೀನನ್ನು ಹೆಚ್.ಎ.ಎಲ್ ಸಂಸ್ಥೆಗೆ ಮಂಜೂರು ಮಾಡಲಾಗಿದೆ. ಈ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶಕ್ಕಾಗಿ ಕುಂದರನಹಳ್ಳಿ ಸ.ನಂ.15 ರ ಸರ್ಕಾರಿ ಜಮೀನಿನಲ್ಲಿ ವಿಸ್ತೀರ್ಣ 5-00 ಎಕರೆ ಮಂಜೂರಾಗಿರುವ ಜಮೀನಿನಲ್ಲಿ ಶ್ರೀಮತಿ ಗಂಗಮ್ಮ ಕೋಂ ಲೇಟ್ ತಿಮ್ಮಯ್ಯ, ಇವರು ಬೆಳೆಸಿರುವ ತೋಟಗಾರಿಕೆ ಹಾಗೂ ಅರಣ್ಯ ಮರಗಳಿಗೆ ಜಿಲ್ಲಾಧಿಕಾರಿ, ತುಮಕೂರು ಇವರು ರೂ.4,56,153/-ನ್ನು (ನಾಲ್ಕು ಲಕ್ಷದ ಐವತ್ತಾರು ಸಾವಿರದ ಒಂದು ನೂರ ಐವತ್ಮೂರು ರೂಗಳು ಮಾತ್ರ) ಮೌಲ್ಯ ನಿರ್ಧರಿಸಿ ಸದರಿ ಮನವಿದಾರರಿಗೆ ಪರಿಹಾರ ಹಣ ಬಿಡುಗಡೆ ಮಾಡಲು ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಸ.ನಂ.01 ರಲ್ಲಿ ವಿಸ್ತೀರ್ಣ 610-00 ಎಕರೆಯನ್ನು ಹೆಚ್.ಎ.ಎಲ್ ಸಂಸ್ಥೆಗೆ ನೀಡಿರುವ ಜಮೀನಿನಲ್ಲಿ ಶ್ರೀಮತಿ ಹೆಚ್.ಆರ್. ಶಾಂತ ಕೋಂ ಜಿ. ಹೆಚ್. ಚನ್ನಕೇಶವಯ್ಯ ಇವರು ಬೆಳಸಿರುವ 45 ಮಾವಿನ ಮರಗಳಿಗೆ ಜಿಲ್ಲಾಧಿಕಾರಿ, ತುಮಕೂರು ಇವರು ರೂ.10,38,421/- (ಹತ್ತು ಲಕ್ಷದ ಮೂವತ್ತೆಂಟು ಸಾವಿರದ ನಾಲ್ಕು ನೂರ ಇಪ್ಪತ್ತೊಂದು ರೂಗಳು ಮಾತ್ರ) ಮೌಲ್ಯ ನಿರ್ಧರಿಸಿ ಸದರಿ ಮನವಿದಾರರಿಗೆ ಪರಿಹಾರ ನೀಡಲು ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3. ಈ ಹಿಂದೆ ಸದರಿ ಜಮೀನಿನಲ್ಲಿ 24 ಬಗರ್ ಹುಕುಂ ಸಾಗುವಳಿದಾರರುಗಳು ಬೆಳಸಿರುವ ಬೆಳೆಗಳಿಗೆ ಪರಿಹಾರ ವಿತರಿಸಿರುವುದಕ್ಕಾಗಿ ಬಿಡುಗಡೆಯಾದ ಪರಿಹಾರ ಧನ ರೂ.2,94,53,459/- ಗಳಿಗೆ ಜಿಲ್ಲಾಧಿಕಾರಿಗಳು, ತುಮಕೂರು ರವರು ಬಳಕೆ ಪ್ರಮಾಣ ಪತ್ರ ನೀಡಿರುತ್ತಾರೆ. ಸದರಿ ಬಳಕೆ ಪ್ರಮಾಣ ಪತ್ರದಲ್ಲಿ ರೂ.4,55,077/- (ನಾಲ್ಕು ಲಕ್ಷದ ಐವತ್ತೈದು ಸಾವಿರದ ಎಪ್ಪತ್ತೇಳು ರೂಗಳು ಮಾತ್ರ) ಬಡ್ಡಿ ಮೊತ್ತ ಉಳಿದಿರುವುದಾಗಿ ತಿಳಿಸಿರುತ್ತಾರೆ. ಈ 24 ಬಗರ್ ಹುಕಂ ಸಾಗುವಳಿದಾರರ ಪಟ್ಟಿಯಲ್ಲಿ ಈ ಮೇಲೆ ವಿವರಿಸಿರುವ 2 ಮನವಿದಾರರ ಹೆಸರುಗಳು ಸೇರಿರುವುದಿಲ್ಲವೆಂಬುದನ್ನು ಸಹ ಜಿಲ್ಲಾಧಿಕಾರಿಗಳು, ತುಮಕೂರು ಇವರು ಸ್ಪಷ್ಟೀಕರಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 84 ಐಟಿಎಸ್ 2020,**
**ಬೆಂಗಳೂರು, ದಿನಾಂಕ: 12.11.2021**

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿ, ಬಿದರೆಹಳ್ಳಿ ಕಾವಲ್ ಗ್ರಾಮದ ಸ.ನಂ.01 ರ ವಿಸ್ತೀರ್ಣದಲ್ಲಿ 610-00 ಎಕರೆ ಜಮೀನು ಮತ್ತು ಕುಂದರನಹಳ್ಳಿ ಸ.ನಂ.15 ರ ಸರ್ಕಾರಿ ಜಮೀನಿನ ವಿಸ್ತೀರ್ಣದಲ್ಲಿ 5-00 ಎಕರೆ ಜಮೀನುಗಳು ಹೆಚ್.ಎ.ಎಲ್ ಸಂಸ್ಥೆಗೆ ಮಂಜೂರಾಗಿದ್ದು, ಸದರಿ ಜಮೀನುಗಳಲ್ಲಿ 2 ಬಗರ್ ಹುಕುಂ ಸಾಗುವಳಿದಾರರುಗಳು ಬೆಳೆಸಿರುವ ಬೆಳೆಗಳಿಗೆ ಅನುಕಂಪ ಧನ ಪರಿಹಾರ ಪಾವತಿಸಬೇಕಾಗಿರುವ ಮೊತ್ತ ಈ ಕೆಳಕಂಡಂತೆ ವಿವರಿಸಿದೆ.

| ಕ್ರ.ಸಂ | ವಿವಿರಗಳು | ಮೊತ್ತ ರೂಗಳು |
|---|---|---|
| 1 | ಶ್ರೀಮತಿ ಹೆಚ್.ಆರ್. ಶಾಂತ ಕೋಂ ಜಿ.ಹೆಚ್. ಚನ್ನಕೇಶವಯ್ಯ | ರೂ. 10,38,421 |
| 2 | ಶ್ರೀಮತಿ ಗಂಗಮ್ಮ ಕೋಂ ಲೇಟ್ ತಿಮ್ಮಯ್ಯ | ರೂ. 4,56,153 |
| 3 | **ಪರಿಹಾರ ಧನ ಬಿಡುಗಡೆ ಮಾಡಬೇಕಾಗಿರುವ ಒಟ್ಟು ಮೊತ್ತ** | **ರೂ. 14,94,574** |
| 4 | ಜಿಲ್ಲಾಧಿಕಾರಿಗಳು, ತುಮಕೂರು ಇವರಲ್ಲಿ ಉಳಿದಿರುವ ಬಡ್ಡಿ ಮೊತ್ತ | ರೂ. 4,55,077 |
| 5 | **ಜಿಲ್ಲಾಧಿಕಾರಿಗಳು, ತುಮಕೂರು ಇವರಿಗೆ ಬಿಡುಗಡೆ ಮಾಡಬೇಕಾಗಿರುವ ಬಾಕಿ ಮೊತ್ತ** | **ರೂ. 10,39,497** |

**ರೂ. 10,39,497/- ಗಳನ್ನು (ರೂಪಾಯಿ ಹತ್ತು ಲಕ್ಷ ಮೂವತ್ತೊಂಬತ್ತು ಸಾವಿರದ ನಾಲ್ಕು ನೂರ ತೊಂಬತ್ತೇಳು ಮಾತ್ರ)** ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

2. ಈ ಮೊತ್ತವನ್ನು 2021-22ನೇ ಲೆಕ್ಕ ಶೀರ್ಷಿಕೆ 5465-01-190-1-05-132-ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-ಬಂಡವಾಳ ವೆಚ್ಚಗಳ ಅಡಿಯಲ್ಲಿ ಭರಿಸತಕ್ಕದ್ದು.

3. ಸದರಿ ಮೊತ್ತವನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು ಇವರು ಹಣ ಸ್ವೀಕೃತಿ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇವರಿಂದ ಪಡೆಯಲು ಅನುಮತಿ ನೀಡಲಾಗಿದೆ. ಸದರಿ ಮೊತ್ತವನ್ನು "ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು" ರವರ ಹೆಸರಿಗೆ ನೀಡುವುದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಅಇ 01 ಟಿಎಫ್‌ಪಿ 2021, ದಿನಾಂಕ 05.04.2021 ರಡಿಯಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kal

(ಕಲಾವತಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ ಇಲಾಖೆ.

ಗೆ,

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.

2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಆ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
5. ಹಿರಿಯ ನಿರ್ದೇಶಕರು, (ಪಿಎಮ್ & ಐ ವಿಭಾಗ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಮ್.ಸಿ, ಖನಿಜ ಭವನ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-1), ವಿಧಾನಸೌದ, ಬೆಂಗಳೂರು.
10. ಕಾರ್ಯನಿರ್ವಹಣಾಧಿಕಾರಿ, ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ಪೋಸ್ಟ್ ಬಾಕ್ಸ್ ನಂ.1790, ಬೆಂಗಳೂರು - 560017.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ.